ಓ.ಎಸ್.70/2021 ಪಿ.ಡಬ್ಲು-1
ಸವಿತಾ ಗಂಡ ವಿಶ್ವನಾಥ

ದಿ.07-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

***ಪಾಟೀ ಸವಾಲು : ಶ್ರೀ. ಹೆಚ್.ಬಿ ವಕೀಲರಿಂದ :-***

ನಾವು ಮೂಲತ: ಲಿಂಗಸುಗೂರಿನವರು. ನನ್ನ ಗಂಡನಿಗ ಈಗ ವಾಸವಾಗಿರುವ ಮನೆ ಬಿಟ್ಟು ಬೇರೆ ಮನೆ ಇರುವುದಿಲ್ಲ. ನಾವು ಹೊಸ ಮನೆ ಕಟ್ಟಿ ಅಲ್ಲಿ ವಾಸವಾಗಿರುತ್ತೇವೆ. ಲಿಂಗಸುಗೂರಿನಿಂದ ಗುಡದನಾಳಿಗೆ ಹೋಗುವ ಮುಖ್ಯರಸ್ತೆಯ ದಕ್ಷಿಣ ದಿಕ್ಕಿಗೆ ನಮ್ಮ ಮನೆ ಇದೆ ಎಂದರೆ ಸರಿ. ನಾವು ವಾಸವಾಗಿರುವ ಮನೆಯ ಉತ್ತರ ದಿಕ್ಕಿಗೆ ವಾದಿಯ ಪ್ಲಾಟ್ ಇದೆ ಎಂದರೆ ಸರಿ. ನಮ್ಮ ಪ್ಲಾಟ್ ನಂ.12 ಎಂದರೆ ಸರಿ. ವಾದಿಯ ಪ್ಲಾಟ್ ನಂ.3 ಎಂದರೆ ಸರಿ. ಪ್ಲಾಟ್ ನಂ.3 ರ ಪೂರ್ವಕ್ಕೆ ಪ್ಲಾಟ್ ನಂ.4 ಬರುತ್ತದೆ ಎಂದರೆ ಸರಿ. ನಾವು ಮನೆ ಕಟ್ಟಿ ಈಗ 10 ವರ್ಷವಾಗಿದೆ. ನಾವು ಮನೆ ಕಟ್ಟುವಾಗ ಪುರಸಭೆಯಿಂದ ಪರವಾನಿಗೆ ಪಡೆದಿರುತ್ತೇವೆ. ಸದರಿ ಪರವಾನಿಗೆ ಪತ್ರವನ್ನು ಹಾಜರು ಪಡಿಸಿರುವುದಿಲ್ಲ.

2. ನಾವು ಮನೆ ಕಟ್ಟುವ ಸಮಯದಲ್ಲಿ ಸುತ್ತ-ಮುತ್ತ ಯಾವ ಮನೆ ಕಟ್ಟಿರಲಿಲ್ಲ ಎಂದರೆ ಸರಿ. ಮನೆ ಕಟ್ಟುವ ಪೂರ್ವದಲ್ಲಿ ಅಕ್ಕ-ಪಕ್ಕ ಯಾರ ಪ್ಲಾಟುಗಳಿವೆ ಎಂದು ವಿಚಾರ ಮಾಡಿರುತ್ತೇವೆ ಎಂದರೆ ಸರಿ. ನಾವು ಮನೆ ಕಟ್ಟುವಾಗ ಪ್ಲಾಟನ್ನು ಅಳತೆ ಮಾಡಿ ಕಟ್ಟಿರುತ್ತೇವೆ. ನಮ್ಮ ಪ್ಲಾಟ್ ಮತ್ತು ವಾದಿಯ ಪ್ಲಾಟ್ ಎಲ್ಲವೂ ಒಂದೆ ಸರ್ವೆ ನಂಬರಿನಲ್ಲಿ ಬರುತ್ತವೆ ಎಂದರೆ ಸರಿ. ವಾದಿಯ ಪ್ಲಾಟ್ ಲಿಂಗಸುಗುರು-ಗುಡದನಾಳ ರಸ್ತೆಗೆ ಹೊಂದಿಕೊಂಡಿದೆ ಎಂದರೆ ಸರಿ. ವಾದಿಯ ಪ್ಲಾಟಿನ ದಕ್ಷಿಣಕ್ಕೆ ನಮ್ಮ ಪ್ಲಾಟ್ ಬರುತ್ತದೆ ಎಂದರೆ ಸರಿ. ವಾದಿಯ ಪ್ಲಾಟ್ ಪೂರ್ವ-ಪಶ್ಚಿಮ 9 ಮೀಟರ್ ಮತ್ತು ಉತ್ತರ-ದಕ್ಷಿಣ 15 ಮೀಟರ್ ಇದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಪ್ಲಾಟಿನ ವಿಸ್ತೀರ್ಣ ಪೂರ್ವ-ಪಶ್ಚಿಮ 40 ಪೀಟ್ ಮತ್ತು ಉತ್ತರ-ದಕ್ಷಿಣ 50 ಪೀಟ್ ಇರುತ್ತದೆ. ಈ ರಿತಿ ವಿಸ್ತೀರ್ಣ ಇದೆ ಎಂದು ತೋರಿಸಲು ನ್ಯಾಯಾಲಯದಲ್ಲಿ ದಾಖಲೆ ಹಾಜರು ಪಡಿಸಿರುತ್ತೇವೆ. ನಮ್ಮ ಪ್ಲಾಟಿನ ವಿಸ್ತೀರ್ಣದ ಪ್ರಕಾರ ನಾವು ಮನೆ ಕಟ್ಟಿಲ್ಲ ಎಂದರೆ ಸರಿಯಲ್ಲ. ನಾವು ವಾದಿಯ ಪ್ಲಾಟಿನ ಪೂರ್ವ-ಪಶ್ಚಿಮ 9 ಮೀಟರ್ ಮತ್ತು ಉತ್ತರ-ದಕ್ಷಿಣ 1 ಮೀಟರ್ ಒತ್ತುವರಿ ಮಾಡಿ ಮನೆ ಕಟ್ಟಿರುತ್ತೇವೆ ಎಂದರೆ ಸರಿಯಲ್ಲ.

3. ನಮ್ಮ ಲೇ-ಔಟಿನಲ್ಲಿ ಎಷ್ಟು ಪ್ಲಾಟ್, ಏನು ಸರ್ವೆ ನಂಬರ್ ಮತ್ತು ವಾರ್ಡ್ ನಂಬರ್ ನನಗೆ ಹೇಳಲು ಬರುವದಿಲ್ಲ. ಒಂದುವೇಳೆ ಖಾಲಿ ನಿವೇಶನ ಇದ್ದರೆ ಬೌಂಡರಿ

ಫಿಕ್ಸ್ ಮಾಡಿ ಮನೆ ಕಟ್ಟಬೇಕಾಗುತ್ತದೆ ಎಂದರೆ ಸಾಕ್ಷಿಯು ನಾವು ಬೌಂಡರಿ ಫಿಕ್ಸ್ ಮಾಡಿ ಮನೆ ಕಟ್ಟಿರುತ್ತೇವೆ ಎನ್ನುತ್ತಾರೆ. ಪುರಸಭೆಯವರು ಸ್ಥಳ ವೀಕ್ಷಣೆ ಮಾಡಿ ವರದಿ ಕೊಟ್ಟ ನಂತರ ಮನೆ ಕಟ್ಟಬೇಕು ಎಂದರೆ ಸಾಕ್ಷಿಯು ವರದಿ ಕೊಟ್ಟ ನಂತರವೇ ನಾವು ಮನೆ ಕಟ್ಟಿರುತ್ತೇವೆ ಎನ್ನುತ್ತಾರೆ. ಆ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿದ ಬಗ್ಗೆ ನನಗೆ ಮಾಹಿತಿ ಇಲ್ಲ. ಓ.ಎಸ್. ನಂ.57/2021 ನಾವು ಶ್ರೀದೇವಿ ಅಮರಗುಂಡಪ್ಪ ರವರ ಮೇಲೆ ಹಾಕಿದ್ದೇವೆ. ಶ್ರೀದೇವಿರವರು ನಮ್ಮ ಪ್ಲಾಟನ್ನು ಒತ್ತುವರಿ ಮಾಡುತ್ತಿದ್ದರಿಂದ ನಾವು ದಾವೆ ಹಾಕಿದ್ದೇವೆ. ಶ್ರೀದೇವಿರವರ ಪ್ಲಾಟ್ ನಮ್ಮ ಪ್ಲಾಟಿನ ಉತ್ತರ ದಿಕ್ಕಿಗೆ ಇದೆ. ನಮ್ಮವು 3 ಪ್ಲಾಟ್ ಇರುತ್ತವೆ ಅವುಗಳ ನಂ.10, 11, 12 ಇರುತ್ತವೆ. ಅವುಗಳ ಚೆಕ್ಕುಬಂದಿ ಹೇಳಲು ನನಗೆ ಬರುವದಿಲ್ಲ. ಸದರಿ ದಾವೆ ವಜಾಗೊಂಡಿರುತ್ತದೆ. ನಾವು ಮನೆ ಕಟ್ಟುವಾಗ ಸುತ್ತ-ಮುತ್ತ ಯಾರ ಪ್ಲಾಟ್ ಬರುತ್ತವೆ ಎಂದು ವಿಚಾರಣೆ ಮಾಡದೆ ಕಟ್ಟಿರುತ್ತೇವೆ ಎಂದರೆ ಸರಿಯಲ್ಲ.

4. ವಾದಿಯು ನಾವು ಮನೆ ಕಟ್ಟುವಾಗ ಪುರಸಭೆಯವರಿಗೆ ನಮ್ಮ ವಿರುದ್ದ ತಕರಾರು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಜಾಗೆಯನ್ನು ಒತ್ತುವರಿ ಮಾಡಿ ಮನೆಯನ್ನು ಕಟ್ಟಿರುತ್ತಾರೆ ಎಂದು ವಾದಿ ಅರ್ಜಿ ಕೊಟ್ಟಿರುತ್ತಾರೆ. ಆ ಬಗ್ಗೆ ಪುರಸಭೆಯವರು ಬಂದು ಮೌಖಿಕವಾಗಿ ಯಾವುದೇ ಒತ್ತುವರಿಯಾಗಿಲ್ಲ ಎಂದು ಹೇಳಿರುತ್ತಾರೆ ಎನ್ನುತ್ತಾರೆ. ಪುರಸಭೆಯವರು ಯಾವುದೇ ಅಭಿಪ್ರಾಯ ಕೊಡದೆ ಇದ್ದರೂ ಸಹ ನಾವು ಸೃಷ್ಟಿ ಮಾಡಿ ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ನಾವು ಮನೆ ಕಟ್ಟಿದ ನಂತರ ವಾದಿಯು ಒತ್ತುವರಿಯನ್ನು ತೆರವುಗೊಳಿಸಿ ಎಂದು ಕೇಳಿರುತ್ತಾರೆ ಎಂದರೆ ಸರಿ. ಆದರೂ ನಾವು ತೆರವು ಮಾಡಿಲ್ಲ ಎಂದರೆ ಸರಿಯಲ್ಲ. ನಾವು ಅಳತೆ ಮಾಡಿಸಿ ಎಂದು ಹೇಳಿರುತ್ತೇವೆ. ನಮ್ಮ ಜಾಗದಲ್ಲಿ ನಾವು ಕಟ್ಟಿದ್ದನ್ನು ತೆಗೆಯುವದಿಲ್ಲ ಎಂದು ಹೇಳಿರುತ್ತೇವೆ. ನಾವು ವಾದಿಯ ಜಾಗವನ್ನು ಒತ್ತುವರಿ ಮಾಡಿ ಮನೆ ಕಟ್ಟಿರುತ್ತೆವೆ ಎಂದರೆ ಸರಿಯಲ್ಲ. ನಾವು ಒತ್ತುವರಿ ಮಾಡಿದ ಜಾಗವನ್ನು ತೆರವುಗೊಳಿಸದೆ ಇರುವದರಿಂದ ವಾದಿ ನಮ್ಮ ವಿರುದ್ದ ಈ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.